**MVC.No <u>408/2023</u>**
**<u>ಆರ್ ಡಬ್ಲ್ಯೂಃ 3</u>**

**<u>ದಿಃ 12.08.2026 ರಂದು ಸಾಕ್ಷಿಗೆ ಪ್ರಮಾಣ ವಚನ ಬೋಧಿಸಲಾಯಿತು.</u>**

**<u>ಮುಖ್ಯ ವಿಚಾರಣೆಃ 2 ನೇ ಎದುರುದಾರರ ಪರ ಶ್ರೀ.ಎ ಎಂ ವಿ ವಕೀಲರಿಂದಃ</u>**

ನಾನು ನನ್ನ ಮುಖ್ಯ ವಿಚಾರಣೆಯನ್ನು ಪ್ರಮಾಣ ಪತ್ರದ ಮೂಲಕ ಸಲ್ಲಿಸಿದ್ದು ಅದನ್ನು ತಯಾರಿಸಲು ನಾನೇ ಮಾಹಿತಿ ನೀಡಿರುತ್ತೇನೆ. ಅದರಲ್ಲಿರುವ ಎಲ್ಲಾ ಸಂಗತಿಗಳು ಸತ್ಯವಾಗಿವೆ ಎಂದು ಪ್ರಮಾಣೀಕರಿಸುತ್ತೇನೆ.

ಅಧಿಕಾರ ಪತ್ರವನ್ನು ನಿಆರ್.6 ಎಂದು, ಪಾಲಿಸಿ ಕಾಪಿಯನ್ನು ನಿಆರ್.7 ಎಂದು, IRDA circular ನ್ನು ನಿಆರ್.8 ಎಂದು ಗುರುತಿಸಲಾಯಿತು.

**<u>ಪಾಟೀ ಸವಾಲುಃ ಅರ್ಜಿದಾರರ  ಪರ ಶ್ರೀ ಬಿ ವೈಟಿ ವಕೀಲರಿಂದಃ</u>**

ಅಪಘಾತದ ಸಮಯದಲ್ಲಿ ಮೃತ ಮಹೇಶ್ವರಪ್ಪನಿಗೆ ಡಿಎಲ್ ಇತ್ತು ಎಂದರೆ ಸರಿಯಲ್ಲ.  ಅಪಘಾತದ ಸಮಯದಲ್ಲಿ ಬೈಕ್ ನಂ.ಕೆಎ-17-ಹೆಚ್ ಎಫ್ -4110 ಕ್ಕೆ ವಿಮೆ ಚಾಲ್ತಿಯಲ್ಲಿ ಇತ್ತು ಎಂದರೆ ಸರಿ.  ಸದರಿ ವಿಮೆ 3rd party coverage ಆಗುತ್ತಿತ್ತು ಎಂದರೆ ಸರಿಯಲ್ಲ.  3rd party coverage ಆಗುತ್ತಿದ್ದರು ಸಹ ಸದರಿ ಮೋಟರ್ ಸೈಕಲ್ ನ ಹಿಂಬದಿ ಸವಾರನಾದ ಮೃತ ಸಂಜು ರವರಿಗೆ ಪರಿಹಾರ ಕೊಡಬೇಕಾಗುತ್ತದೆ ಎನ್ನುವ ಉದ್ದೇಶದಿಂದ 3rd party coverage ಆಗುತ್ತಿರಲಿಲ್ಲ ಎಂದು ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ಅರ್ಜಿದಾರರಿಗೆ ಕೊಡಬೇಕಾದ ಪರಿಹಾರದ ಹೊಣೆಗಾರಿಕೆಯಿಂದ ತಪ್ಪಿಸಿಕೊಳ್ಳುವ ಉದ್ದೇಶದಿಂದ ಸುಳ್ಳು ತಕರಾರು ಸಲ್ಲಿಸಿ ಸುಳ್ಳು ಸಾಕ್ಷಿ ನುಡಿಯುತ್ತಿರುವೆ ಎಂದರೆ ಸರಿಯಲ್ಲ.

**ಮರು ವಿಚಾರಣೆಃ ಇರುವುದಿಲ್ಲ**

(ತೆರೆದ ನ್ಯಾಯಾಲಯದಲ್ಲಿ ಸಾಕ್ಷಿ ಹೇಳಿಕೆಯನ್ನು ನನ್ನ ಉಕ್ತಲೇಖನದಂತೆ ಬೆರಳಚ್ಚು ಮಾಡಲಾಯಿತು)

ಓ ಹೇ ಕೇ ಸರಿ ಇದೆ.

ಹಿರಿಯ ಸಿವಿಲ್ ನ್ಯಾಯಾಧೀಶರು
ಮತ್ತು ಜೆ ಎಂ ಎಫ್ ಸಿ., ಚನ್ನಗಿರಿ.